ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕರ್ನಾಟಕ ಕೃಷಿ ಇಲಾಖೆ

ಸಮಗ್ರ ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–೬೫

ಕೋರ ಹೋಬಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **25.04.2014**

ಈ ವಾರದ ಮುನ್ಸೂಚನೆ (ದಿನಾಂಕ **26-04-14 to 30.04.14** ವರೆಗೆ)

ನಿಯತಾಂಕಗಳು	26/04	27/04	28/04	29/04	30/04
ಮಳೆ (ಮಿ ಮಿ)	3	0	0	4	0
ಗರಿಷ್ಠ ಉಷ್ಣಾಂಶ(ಡಿ.ಸೆ.)	38	37	38	37	37
ಕನಿಷ್ಠ ಉಷ್ಣಾಂಶ (ಡಿ.ಸೆ.)	23	22	22	23	22
ಮೋಡ (ಪ್ರಮಾಣ)	4	3	2	2	1
ಅರ್ದ್ರತೆ ೭.೨೦ ಬೆ (ಶೇ)	70	66	60	71	79
ಅರ್ದ್ರತೆ ೨.೨೦ ಮ (ಶೇ)	35	39	36	32	32
ಗಾಳಿಯ ವೇಗ (ಕಿ.ಮಿ/ಗಂಟೆಗೆ)	3	4	2	2	4
ಗಾಳಿಯ ದಿಕ್ಕು (ಡಿಗ್ರಿ)	250	240	210	240	240

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ತುಮಕೂರು ಹಾಗೂ ಸುತ್ತಮುತ್ತ ಒಣಹವೆ ಮುಂದುವರೆಯಲಿದೆ. ಭಾರತೀಯ ಹವಾಮಾನ ಇಲಾಖೆಯ ವರದಿಯ ಪ್ರಕಾರ ಮುಂದಿನ ಐದು ದಿನಗಳಲ್ಲಿ ದಿನದ ಕೆಲವು ಸಮಯ ಮೋಡ ಕವಿದ ವಾತಾವರಣವಿದ್ದು, ಚದುರಿದಂತೆ ಹಗುರವಾದ ಮಳೆಯನ್ನು ನಿರೀಕ್ಷಿಸಬಹುದು (ಶನಿವಾರ ಹಾಗೂ ಮಂಗಳವಾರ). ದಿನದ ಗರಿಷ್ಠ ಉಷ್ಣಾಂಶ **37.0-38.0°C** ಮತ್ತು ಕನಿಷ್ಠ **22-23°C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **60-79 %** ಇದ್ದು, ಮಧ್ಯಾಹ್ನ **32-39 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **2-4** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ✓ ಮಳೆ ಆಗಿರುವ ಕಡೆಯಲ್ಲಿ ಕೃಷಿ ಭೂಮಿಯನ್ನು ಆಳವಾಗಿ ಉಳುಮೆ ಮಾಡಬೇಕು. ಹಾಗೆ ಮಾಡುವುದರಿಂದ ನೀರು ಮಣ್ಣಿನಲ್ಲಿ ಚೆನ್ನಾಗಿ ಹಿಂಗುತ್ತದೆ ಹಾಗೂ ಕೀಟ ಹಾಗೂ ರೋಗ ಭಾದೆ ಕಡಿಮೆಯಾಗುತ್ತದೆ.

ಏಪ್ರಿಲ್ ತಿಂಗಳಲ್ಲಿ ಬೆಳೆಯಬಹುದಾದ ತಳಿಗಳು:

ಬಿತ್ತನೆಗೆ ಬೇಕಾದ ಉತ್ತಮ ಗುಣಮಟ್ಟದ ಬೀಜಗಳನ್ನು ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಕೃಷಿ ವಿಜ್ಞಾನ ಕೇಂದ್ರದಲ್ಲಿ ಖರೀದಿಸಲು ಸೂಚಿಸಲಾಗಿದೆ. ರಾಗಿಯ ಎಮ್ ಆರ್–೧.೬. ಹಾಗೂ ತೊಗರಿ ತಳಿಗಳಾದ ಬಿ.ಆರ್.ಜಿ–೧,೨ ತಳಿಗಳು ಉತ್ತಮವಾಗಿದ್ದು ಜಿ.ಕೆ.ವಿ.ಕೆ ಯಲ್ಲಿ ಲಭ್ಯವಿದೆ.

ರಾಗಿ: ಇಂಡಾಫ್ಟ್–೯, ಅಲಸಂದೆ: ಟಿ.ವಿ.ಎಕ್ಸ್–944, ಕೆ.ಬಿ.ಸಿ– 1, ಉದ್ದು: ಕರೆಗಾಂವ್–೩, ಟಿ–9, ರಶ್ಮಿ. ಶಕ್ತಿಮಾನ್ ಮುಸುಕಿನ ಜೋಳ: ಸಿ.ಎಸ್.ಹೆಚ್–೫, ಸಿ.ಎಸ್.ಹೆಚ್–೯. ಅವರೆ: ಹೆಚ್,ಎ.–೩, ಹೆಚ್,ಎ.–೪. ತೋಟಗಾರಿಕೆ ಬೆಳೆಗಳು: ಬಾಳೆ, ಬೆಂಡೆ, ತಿಂಗಳ ಅವರೆ, ಶುಂಠಿ.

ತರಕಾರಿ ಬೆಳೆಗಳಲ್ಲಿ ಕಂದುಬರುವ ಬೂಜು ರೋಗ ಮತ್ತು ಆಲೂಗಡ್ಡೆ ಬೆಳೆಯಲ್ಲಿ ಕಂಡುಬರುವ ಕೊನೆ ಅಂಗಮಾರಿ ರೋಗಗಳ ನುಯಂತ್ರಣಕ್ಕೆ ರಿಡೊಮಿಲ್/**Ridomil**+ಮ್ಯಾಂಕೊಜೆಬ್ (2 ಗ್ರಾಂ/ಪ್ರತಿ ಲೀಟರ್ ನೀರಿಗೆ) ಬೆರೆಸಿ ಸಿಂಪಡಿಸುವುದು.

- ➢ ದಿನೇ ದಿನೇ ಬಿಸಿಲಿನ ಝಳ ಹೆಚ್ಚಾಗುತ್ತಿರುವುದರಿಂದ ತರಕಾರಿ ಬೆಳೆಗಳಿಗೆ ಹೆಚ್ಚಿನ ನೀರನ್ನು ಪೂರೈಸಬೇಕು.
- ➢ ರಸ ಹೀರುವ ಕೀಟಗಳ ಹಾವಳಿ ಜಾಸ್ತಿ ಇರುವುದರಿಂದ 5% ಬೇವಿನ ಕಷಾಯ ಅಥವಾ ಇಮಿಡಾಕ್ಲೋಪ್ರಿಡ್ ಸಿಂಪಡಿಸಿ.

ಚೆಂಡು ಹೂ: ಕೆಲವು ಕಡೆ ಪೋಷಕಾಂಶಗಳ ಕೊರತೆಯಿಂದ ಎಲೆಗಳು ಕಂದು ಅಥವಾ ಹಳದಿ ಬಣ್ಣಕ್ಕೆ ತಿರುಗುತ್ತವೆ. ಹತೋಟಿ ಮಾಡಲು ಬಯೋ–೨೦ ಸಿಂಪಡಿಸಬೇಕು ಅಥವಾ ಭೂಮಿಶಕ್ತಿ ಅಥವಾ ಮಹಾಫ್ಲೀಡ್ ಅನ್ನು ಹನಿ ನೀರಾವರಿ ಮೂಲಕ ಕೊಡಬೇಕು.

- ➢ ಜಾನುವಾರು ನಿರ್ವಹಣೆ: ಹಸುಗಳನ್ನು ನೆರಳಿನಲ್ಲೇ ಬಿಡಬೇಕು, ಶುದ್ಧ ನೀರನ್ನು ಕುಡಿಸಿ, ಕೊಟ್ಟಿಗೆಗಳನ್ನು ತಂಪಾಗಿ ಇಟ್ಟುಕೊಳ್ಳುವುದು ದನಕರುಗಳಿಗೆ ಕಾಲುಬಾಯಿಜ್ವರ ರೋಗದ ಭೀತಿ ಇರುವುದರಿಂದ ಅಗತ್ಯ ಮುನ್ನೆಚ್ಚರಿಕೆ ಕ್ರಮವಹಿಸಿ ಲಸಿಕೆ ಹಾಕಿಸುವುದು ಅತಿ ಅವಶ್ಯಕ.

ನೋಡಲ್ ಅಧಿಕಾರಿ:

ಡಾ.ಎಮ್.ಬಿ. ರಾಜೇಗೌಡ

ಬೆಂಗಳೂರು